ದಿಃ 02.04.2026

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.185/2024**

| | | | |
|---|---|---|---|
| ಸಾಕ್ಷಿಯ ಹೆಸರು | : | ಪರಮೇಶ್ವರಪ್ಪ | ಪ್ರಾಸಾಃ1 |
| ತಂದೆಯ ಹೆಸರು | : | ಲೇಟ್ ಚಿಕ್ಕಪ್ಪ | ಚಾಸಾಃ1 |
| ವಯಸ್ಸು | : | 71 ವರ್ಷ | |
| ಕೆಲಸ | : | ನಿವೃತ್ತ ಸರ್ಕಾರಿ ನೌಕರರು | ಸಾ ಪ್ರ ಬೋ |
| ವಾಸ | : | ಗುಡ್ಡದ ಸಾಂತೇನಹಳ್ಳಿ | ದಿಃ02.04.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ತಮ್ಮನ ಮಗ. ಚಾಸಾ-2 ರಿಂದ 4 ನಮ್ಮ ಗ್ರಾಮದವರು.

2. ನನ್ನ ಮತ್ತು ಆರೋಪಿ ನಡುವೆ ಯಾವುದೇ ಗಲಾಟೆ ನಡೆದಿಲ್ಲ. ಆರೋಪಿ ನನಗೆ ಯಾವುದೇ ತೊಂದರೆ ನೀಡಿಲ್ಲ. ಈ ಪ್ರಕರಣದ ಕುರಿತು ನಾನು ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಯಾವುದೇ ಮಹಜರಿನ ಕ್ರಮವನ್ನು ಜರುಗಿಸಿಲ್ಲ ಮತ್ತು ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿಲ್ಲ. ಸಾಕ್ಷಿ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಈ ಕುರಿತು ನಾನು ತನಿಖಾಧಿಕಾರಿಗೆ ಯಾವುದೇ ಮರು ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

3. ನನ್ನ ತಂದೆಯ ಹೆಸರಿನಲ್ಲಿರುವ ನನ್ನ ಭಾಗಕ್ಕೆ ಬಂದಿರುವ ಸರ್ವೆ ನಂಬರ್ 41/2 ರ ಜಮೀನಿನ ಪಕ್ಕದ ಜಮೀನಿನವರಾದ ಆರೋಪಿ ಆಗಾಗ ತಮ್ಮ ತಮ್ಮ ಜಮೀನಿನಲ್ಲಿ ಇರುವ ಅಡಿಕೆ ಮತ್ತು ತೆಂಗಿನ ತೋಟದ ಗಿಡಗಳಿಗೆ ನೀರು ಬಿಡುವ ವಾಲುಗಳನ್ನು ತಿರುವಿಕೊಳ್ಳುವ

ದಿಃ 02.04.2026

ವಿಚಾರವಾಗಿ ಬಾಯಿ ಮಾತಿನ ಜಗಳ ನಡೆಯುತ್ತಿತ್ತು ಎಂದರೆ ಸರಿ. ದಿನಾಂಕ 31.01.2024 ರಂದು ಮಧ್ಯಾಹ್ನ 03.45 ರ ಸಮಯದಲ್ಲಿ ನಾನು ನಮಗೆ ಸೇರಿದ ಸರ್ವೆ ನಂಬರ್ 41/2 ರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿ ನಮ್ಮ ಜಮೀನಿಗೆ ಅಕ್ರಮ ಪ್ರವೇಶ ಮಾಡಿ, ನನ್ನ ಹತ್ತಿರ ಜಗಳ ತೆಗೆದು, ನನಗೆ ಅವಾಚ್ಯ ಶಬ್ದಗಳಿಂದ ಬೈದು, ನನ್ನನ್ನು ಹಿಡಿದು ಎಳೆದಾಡಿ, ನನ್ನ ಎದೆಗೆ ಮತ್ತು ಮೈಕೈಗೆ ನೋವನ್ನು ಉಂಟು ಮಾಡಿ, ಅಲ್ಲೆ ಬಿದಿದ್ದ ಕಲ್ಲನ್ನು ತೆಗೆದುಕೊಂಡು ನನ್ನ ಎಣಮೊಣಕಾಲಿಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ನನ್ನನ್ನು ಹಿಡಿದು ಎಳೆದಾಡುವಾಗ ನನ್ನ ಷರ್ಟಿನ ಜೇಬಿನಲ್ಲಿ ಇದ್ದ ಮೊಬೈಲು ಕೆಳಗೆ ಕಲ್ಲಿಗೆ ಬಿದ್ದು, ಹೊಡೆದು ಹೋಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ನಾನು ದಿನಾಂಕ 06.02.2024 ರಂದು ನಿಪಿ-1 ರಂತೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ದೂರು ದಾಖಲಾದ ನಂತರ ದಿನಾಂಕ 07.02.2024 ರಂದು ನಾನು ಸ್ಥಳ ತೋರಿಸಿದ ಮೇರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಮಧ್ಯಾಹ್ನ 01.00 ರಿಂದ 02.00 ರವರೆಗೆ ಮಹಜರನ್ನು ಜರುಗಿಸಿ ಕಲ್ಲನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದೂರಿನಲ್ಲಿ ಬಿಟ್ಟು ಹೋದ ವಿಚಾರಗಳ ಕುರಿತು ದಿನಾಂಕ 07.02.2024 ರಂದು ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು.

4. ನಾನು ಮತ್ತು ಆರೋಪಿ ಸಂಬಂಧಿಕರಾದ ಕಾರಣ ಮತ್ತು ನಮ್ಮ ನಡುವೆ ಎದುರು ದೂರು ದಾಖಲಾಗಿರುವ ಕಾರಣ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಹಾಗಾಗಿ ನಾನು ಮತ್ತು ಆರೋಪಿ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಾವು ಮತ್ತು ಆರೋಪಿ ರಾಜೀ ಮಾಡಿಕೊಂಡಿರುವ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಇರುವುದಿಲ್ಲ ಎಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.